

# ಬಾಬು ನೆನಪಿನ ‘ಕುಚಿಕು’

‘ಕುಚಿಕು ಕುಚಿಕು ಕುಚಿಕು’ ಡಿ. ರಾಜೇಂದ್ರಬಾಬು ನಿರ್ದೇಶನದ ‘ದಿಗ್ಗಜರು’ ಚಿತ್ರದ ಜನಪ್ರಿಯ ಗೀತೆ. ವಿಷ್ಣುವರ್ಧನ್ ಹಾಗೂ ಅಂಬರೀಶ್ ಅವರ ಸ್ನೇಹದ ಅಭಿವ್ಯಕ್ತಿಯಂತಿರುವ ಈ ಗೀತೆಯನ್ನು ಸ್ನೇಹದ ಮೌಲ್ಯವನ್ನು ಬಣ್ಣಿಸುವ ರೂಪದಲ್ಲೇ ಬಳಕೆಯಲ್ಲಿದೆ. ಈಗ ಅದೇ ಹೆಸರಿನ ಸಿನಿಮಾ ಜುಲೈ 6ರಂದು ತೆರೆ ಕಾಣುತ್ತಿದೆ.

‘ಕುಚಿಕು ಕುಚಿಕು’ ಚಿತ್ರಕ್ಕೆ ಭಾವುಕತೆಯ ನಂಟಿದೆ. ಡಿ. ರಾಜೇಂದ್ರಬಾಬು ನಿರ್ದೇಶನದ ಕೊನೆಯ ಚಿತ್ರ ಎನ್ನುವುದು ಇದರ ವಿಶೇಷ. ಜೊತೆಗೆ ಬಾಬು ಅವರ ಪುತ್ರಿ ನಕ್ಷತ್ರಾ ಚಿತ್ರದ ನಾಯಕಿಯಾಗಿ ನಟಿಸಿದ್ದಾರೆ. ನಕ್ಷತ್ರಾ ಅವರಿಗಿದು ಅಪ್ಪನ ನೆನಪಿನ–ಕನಸಿನ ಸಿನಿಮಾ. ಮಗಳನ್ನು ನಾಯಕಿಯನ್ನಾಗಿ ನೆಲೆ ನಿಲ್ಲಿಸಬೇಕು ಎನ್ನುವ ಹಂಬಲದಿಂದ ಬಾಬು ಈ ಸಿನಿಮಾ ನಿರ್ದೇಶಿಸಿದ್ದರು. ಆದರೆ, ಇದೀಗ ಬಾಬು ಅವರ ಅನುಪಸ್ಥಿತಿಯಲ್ಲಿ ಸಿನಿಮಾ ತೆರೆ ಕಾಣುತ್ತಿದೆ. ಬಹುಕಾಲದಿಂದ ನೆನೆಗುದಿಗೆ ಬಿದ್ದಿದ್ದ ಚಿತ್ರವನ್ನು ರಾಜೇಂದ್ರಬಾಬು ಅವರ ಮೇಲಿನ ಗೌರವದಿಂದಲೇ ಚಿತ್ರತಂಡ ತೆರೆ ಕಾಣಿಸುತ್ತಿದೆ.

ಜಯರಾಮ್ ಕಾರ್ತೀಕ್ ಚಿತ್ರದ ನಾಯಕ. ಹಿರಿಯ ನಟರಾದ ಸುಮಿತ್ರಾ ಹಾಗೂ ರಮೇಶ್‌ಭಟ್ ತಾರಾಗಣದಲ್ಲಿರುವ ಹಿರಿಯ ಕಲಾವಿದರು. ಚಿತ್ರಕಥೆಯಲ್ಲಿನ ಮಾನವೀಯ ಮೌಲ್ಯಗಳು ರಮೇಶ್‌ಭಟ್ ಅವರಿಗೆ ಖುಷಿಕೊಟ್ಟಿವೆ. ನಂದಕುಮಾರ್ ಛಾಯಾಗ್ರಹಣ ಹಾಗೂ ಹಂಸಲೇಖಾ ಸಂಗೀತ ಚಿತ್ರಕ್ಕಿದೆ. ಇಬ್ಬರಿಗೂ ಈ ಸಿನಿಮಾ ತಮ್ಮ ವೃತ್ತಿಜೀವನದ ವಿಶೇಷ ಅನುಭವ ಎನ್ನಿಸಿದೆ. ರಾಜೇಂದ್ರಬಾಬು ಅವರ ವೃತ್ತಿಪರತೆ ಹಾಗೂ ಮಾನವೀಯತೆ ಬಗ್ಗೆ ಭಾವುಕರಾಗಿ ಮಾತನಾಡುವ ಹಂಸಲೇಖಾ, ಅಂಥ ನಿರ್ದೇಶಕರು ಕನ್ನಡ ಚಿತ್ರರಂಗಕ್ಕೀಗ ಜರೂರಾಗಿಬೇಕು ಎನ್ನುತ್ತಾರೆ.



# ಶಾಲೆಯ ಜೊತೆಗೆ ಮನರಂಜನೆ

‘ಕಾಫಿ ತೋಟ’, ‘ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ’ ಚಿತ್ರಗಳ ನಂತರ ರಾಧಿಕಾ ಚೇತನ್ ಮುಖ್ಯ ಪಾತ್ರದಲ್ಲಿ ನಟಿಸಿರುವ ಮತ್ತೊಂದು ಸಿನಿಮಾ ತೆರೆ ಕಾಣುತ್ತಿದೆ. ಚಿತ್ರದ ಹೆಸರು ‘ಅಸತೋಮಾ ಸದ್ಗಮಯ’ (ಜುಲೈ 6ರಂದು ತೆರೆಗೆ).

ರಾಧಿಕಾ ಅವರನ್ನು ಹೊರತುಪಡಿಸಿದರೆ ಚಿತ್ರತಂಡದಲ್ಲಿ ಹೊಸಮುಖಗಳೇ ಹೆಚ್ಚು. ಹಾಗಾಗಿ ರಾಧಿಕಾ ಅವರನ್ನು ಮುಂದಿಟ್ಟುಕೊಂಡೇ ಚಿತ್ರತಂಡ ಪ್ರಚಾರದಲ್ಲಿ ತೊಡಗಿಕೊಂಡಿದೆ. ರಾಜೇಶ್ ಸವಣೂರು ಚಿತ್ರದ ನಿರ್ದೇಶಕರು. ಸರ್ಕಾರಿ ಮತ್ತು ಖಾಸಗಿ ಶಾಲೆಗಳ ಕಥೆ ಸಿನಿಮಾದಲ್ಲಿದೆಯಂತೆ. ಕಥೆಯ ಹಂದರ ನೋಡಿದರೆ ನಿರ್ದೇಶನದ ಚೊಚ್ಚಿಲ ಚಿತ್ರದಲ್ಲೇ ರಾಜೇಶ್ ಗಂಭೀರ ವಸ್ತುವೊಂದನ್ನು ಆಯ್ದುಕೊಂಡಂತಿದೆ.

ಬೆಂಗಳೂರು, ಮಂಗಳೂರು, ಕಾರ್ಕಳದ ಪರಿಸರದಲ್ಲಿ ಚಿತ್ರೀಕರಣ ನಡೆಸಿದ್ದಾರೆ. ಗಂಭೀರವಾದ ಸಂದೇಶದ ಚಿತ್ರದಲ್ಲಿದ್ದರೂ ಹಾರರ್, ಸಸ್ಪೆನ್ಸ್, ರೊಮಾನ್ಸ್ ಅಂಶಗಳು ಕೂಡ ಚಿತ್ರಕಥೆಯಲ್ಲಿ ಇವೆಯಂತೆ. ಹಾಗಾಗಿ ಎಲ್ಲ ವರ್ಗದ ಪ್ರೇಕ್ಷಕರನ್ನು ಸಿನಿಮಾ ರಂಜಿಸಲಿದೆ ಎನ್ನುವ ವಿಶ್ವಾಸ ನಿರ್ದೇಶಕರದು. ರಾಧಿಕಾ ಚೇತನ್‌ಗೆ ಜೋಡಿಯಾಗಿ ಕಿರಣ್ ರಾಜ್ ನಟಿಸಿದ್ದಾರೆ. ಲಾಸ್ಯ ನಾಗರಾಜ್ ಹಾಗೂ ಬೇಬಿ ಚಿತ್ರಾಲಿ ತಾರಾಗಣದಲ್ಲಿರುವ ಪ್ರಮುಖರು. ವಹಾಬ್ ಸಲೀಂ ಸಂಗೀತ ಚಿತ್ರಕ್ಕಿದೆ. ಮಕ್ಕಳ ದೊಡ್ಡದೊಂದು ತಂಡವೇ ಚಿತ್ರದಲ್ಲಿ ನಟಿಸಿದೆ.

ರಾಧಿಕಾ ಚೇತನ್ ನಾಯಕಿಯಾದರೂ ಲಾಸ್ಯ ಅವರ ಪಾತ್ರಕ್ಕೂ ಚಿತ್ರದಲ್ಲಿ ಸಾಕಷ್ಟು ಅವಕಾಶವಿದೆಯಂತೆ. ತಂದೆಯನ್ನು ಹುಡುಕಿಕೊಂಡು ಭಾರತಕ್ಕೆ ಬರುವ ಯುವತಿಯ ಪಾತ್ರದಲ್ಲಿ ರಾಧಿಕಾ ನಟಿಸಿದ್ದರೆ, ತುಂಬು ಜೀವನೋತ್ಸಾಹದ ಗ್ಲಾಮರಸ್ ಯುವತಿಯಾಗಿ ಲಾಸ್ಯ ಕಾಣಿಸಿಕೊಂಡಿದ್ದಾರೆ.